# ಸಿದ್ಧರಾಮನ ವಚನಗಳಲ್ಲಿ ಸಾಮಾಜಿಕ ಜೀವನ ಮೌಲ್ಯಗಳು

**ಡಾ. ಪ್ರಸನ್ನ ನಂಜಾಪುರ**
ಕನ್ನಡ ಉಪನ್ಯಾಸಕರು,
ಸ್ನಾತಕೋತ್ತರ ಕೇಂದ್ರ, ರಾಮನಗರ,
ಬೆಂಗಳೂರು ವಿಶ್ವವಿದ್ಯಾಲಯ.

12ನೇ ಶತಮಾನದ ವಚನ ಚಳವಳಿಯು ಚಲನಶೀಲವಾದ ಧಾರ್ಮಿಕ ನಡೆಯ ಮೂಲಕ ಸಾಮಾಜಿಕ ಬದುಕಿನ ಚಿಂತನೆಗಳನ್ನು ಕುರಿತ ಅಭಿವ್ಯಕ್ತಿಯಾಗಿದೆ. ಇದು ಕಾಯಕ ತತ್ವದಿಂದ ಹೊರಟು ಸಾಮಾಜಿಕ ಪರಿಸರವನ್ನು ಹಾಯ್ದು ಶಿವತತ್ವದೆಡೆಗೆ ಸಾಗುವ ಮತ್ತು ಆ ಮೂಲಕ ಲೌಕಿಕ ಬದುಕನ್ನು ಅತ್ಯಂತ ವೈಚಾರಿಕ ನೆಲೆಯಲ್ಲಿ ಪ್ರಭಾವಿಸಿದ ಸಂದರ್ಭ. ಸಾಮಾಜಿಕ ಬದುಕಿಗೆ ಜಡತ್ವವಾಗಿ ಪರಿಣಮಿಸಿದ್ದ ಲಿಂಗ, ಜಾತಿ, ವೃತ್ತಿಗಳ ಬಗೆಗಿದ್ದ ಹಲವು ರೀತಿಯ ಸಾಂಪ್ರದಾಯಿಕ ಚೌಕಟ್ಟುಗಳನ್ನು ಮುರಿದು ಮಾನವ ಬಂಧುತ್ವವನ್ನು ಪ್ರತಿಪಾದಿಸಿದ ಈ ಚಳವಳಿಯು ಧಾರ್ಮಿಕ, ಸಾಮಾಜಿಕ, ರಾಜಕೀಯ, ಸಾಹಿತ್ಯಿಕಗಳಂತಹ ಹಲವು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಸಂಚಲನವನ್ನು ಮೂಡಿಸಿದೆ. ಸಮಾನತೆ, ಸಹಿಷ್ಣತೆ, ಬಹುತ್ವ, ಬಂಧುತ್ವ, ಮಾನವೀಯತೆ, ಅಹಿಂಸೆ, ಅಭಿವ್ಯಕ್ತಿ ಸ್ವಾತಂತ್ರ್ಯಗಳಂತಹ ಸಾರ್ವಕಾಲಿಕ ಮೌಲ್ಯಗಳನ್ನು ತನ್ನ ನಡೆನುಡಿಗಳಿಂದ ಬಿತ್ತಿ ಬೆಳೆದು ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಗೆ ಚಲನಶೀಲವಾದ ಪರಂಪರೆಯನ್ನು ಒದಗಿಸಿಕೊಟ್ಟಿದೆ. ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ, ಚನ್ನಬಸವಣ್ಣ, ಸಿದ್ಧರಾಮರಂತಹ ಪ್ರಮುಖರಾದಿಯಾಗಿ ವೈವಿಧ್ಯಮಯ ಕಾಯಕ ವೃತ್ತಿಯ ಹಿನ್ನೆಲೆಯಿಂದ ಬಂದ ಶರಣರೂ, ವಚನಕಾರರೂ ಶಿವತತ್ವದಡಿಯಲ್ಲಿ ಸಂಘಟಿತರಾಗಿ ಅಭಿವ್ಯಕ್ತಿಸಿದ ವಿವಿಧ ಆಶಯಗಳನ್ನು ಅವರ ವಚನಗಳಲ್ಲಿ ಕಾಣಬಹುದಾಗಿದೆ.

ಕಾಯಕಯೋಗಿ, ಕರ್ಮಯೋಗಿ, ಶಿವಯೋಗಿ ಎಂದೇ ಜನಮಾನಸದಲ್ಲಿ ಸಾಗಿಬಂದಿರುವ ಸಿದ್ಧರಾಮರು ಕ್ರಿ.ಶ. ಸುಮಾರು 1160ರಲ್ಲಿ ಮುದ್ದಯ್ಯ ಮತ್ತು ಸುಗ್ಗವ್ವೆ ಎಂಬ ದಂಪತಿಗಳಿಗೆ ಸೊನ್ನಲಿಗೆ (ಇಂದಿನ ಮಹಾರಾಷ್ಟ್ರದ ಸೊಲ್ಲಾಪುರ) ಎಂಬಲ್ಲಿ ಜನಿಸಿದರು. ಬಾಲ್ಯದ ಹೆಸರು ಧೂಳಿಮಾಕಾಳ. ಆದರೆ ಈ ಹೆಸರಿಗೆ ಓಗೊಡದ ಬಾಲಕನಿಗೆ ಜನ್ಮಪೂರ್ವದಲ್ಲಿಯೇ ರೇವಣ್ಣಸಿದ್ಧರು ಸೂಚಿಸಿದ್ದ ಸಿದ್ಧರಾಮ ಎಂಬ ಹೆಸರೇ ಸ್ಥಿರವಾಗುತ್ತದೆ. ಬಾಲ್ಯದಿಂದಲೂ ಶಿವಧ್ಯಾನಿಯಾದ ಸಿದ್ಧರಾಮ ತನ್ನ ಇಷ್ಟದೈವ ಮಲ್ಲಯ್ಯನನ್ನು ಹರಸುತ್ತ ಯಾತ್ರಿಕರೊಡನೆ ಶ್ರೀಶೈಲಕ್ಕೆ ಬಂದು ಅಲ್ಲಿ ಶಿವನನ್ನು ಸಾಕ್ಷಾತ್ಕಾರ ಮಾಡಿಕೊಂಡ ಮೇಲೆ ಸೊನ್ನಲಿಗೆಯಲ್ಲಿ ನೆಲೆನಿಂತು ಶಿವಸಂಸ್ಕೃತಿಯ ಮೂಲಕ ಕಾಯಕ ಸಂಸ್ಕೃತಿಯನ್ನು, ಕಾಯಕ ಸಂಸ್ಕೃತಿಯ ಮೂಲಕ ಶಿವಸಂಸ್ಕೃತಿಯನ್ನು ಆಚರಿಸುತ್ತಾ ಹಲವು ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಗಳನ್ನು ಕೈಗೊಂಡು ಸಾಮಾನ್ಯ ಜನರ ಲೌಕಿಕ ಬದುಕನ್ನು ಉದ್ಧರಿಸಿದವರು.

**“ಹಾದಿ ಹಾದಿಗೆ ಗುಡಿಯ ಬೀದಿ ಬೀದಿಗೆ ಕೆರೆಯ**
**ಸಾಧಿಸಿದ ಕಟ್ಟ ಸಿದ್ಧರಾಮ–ಸೊನ್ನಲಿಗೆ**
**ಸಾಧು ಸಿದ್ಧನಿಗೆ ಮನೆಯಾಯ್ತು.”**

ತಮ್ಮ ಸಾವಿರಾರು ಶಿಷ್ಯರೊಂದಿಗೆ ಹಾರೆ ಗುದ್ದಲಿಯನ್ನು ಹಿಡಿದು ದುಡಿಯುತ್ತಾ ಸೊನ್ನಲಿಗೆಯಲ್ಲಿ ಮಲ್ಲಿಕಾರ್ಜುನ ದೇವಾಲಯವನ್ನು ಕಟ್ಟುವುದರ ಜೊತೆಗೆ ಸಕಲ ಜೀವರಾಶಿಗೂ ಉಪಯೋಗವಾಗುವಂತಹ ಕೆರೆ, ಕಟ್ಟೆ, ಅರವಟ್ಟಿಗೆ, ಅನ್ನಛತ್ರಗಳನ್ನು ಕಟ್ಟುತ್ತ, ಬಡವರಿಗಾಗಿ ಭೂದಾನ, ವಸ್ತ್ರದಾನ, ಗೋದಾನ, ಮಹಿಷದಾನಗಳನ್ನು, ಸಾಮೂಹಿಕ ವಿವಾಹ ಕಾರ್ಯಗಳನ್ನು ಏರ್ಪಡಿಸುವುದು ಅಸಹಾಯಕ ಸಾಲವನ್ನು ತೀರಿಸುವುದು, ಹೀಗೆ ಹಲವಾರು ಸಾಮಾಜಿಕ ಕಾರ್ಯಗಳನ್ನು ಮಾಡುತ್ತ ಬಂದವರು. “ಎಲೆ ಅಯ್ಯ ನಿಮ್ಮವರ ನೋವೆ ಎನ್ನ ನೋವು ನೋಡಾ ಕಂಡು ಕಂಡು ಸೈರಿಸಲಾರೆ ನೋಡಯ್ಯ” (ವ. ಸಂ. 1010) ಎನ್ನುವ ಸಿದ್ಧರಾಮರಿಗೆ ಬಡಜನರ ಬಗೆಗೆ ಅಪಾರವಾದ ಕರುಣೆ, ಪ್ರೀತಿ, ಅನುಕಂಪ, ಮಾನವೀಯತೆಗಳು ಇದ್ದವು. ಲೌಕಿಕವಾಗಿ, ಧಾರ್ಮಿಕವಾಗಿ ಇಷ್ಟೆಲ್ಲಾ ಸಾಧನೆ ಮಾಡಿದ್ದರೂ ತಮ್ಮ ಬಗೆಗಿನ ಸಮಕಾಲೀನ ಲೋಕದ ಪ್ರಶಂಸೆಗೆ ಅತ್ಯಂತ ವಿನಯದಿಂದಲೇ ತಮ್ಮ ಒಂದು ವಚನದಲ್ಲಿ ಹೀಗೆ ಪ್ರತಿಕ್ರಿಯಿಸಿದ್ದಾರೆ. “ಎನ್ನದಾನಿಯೆಂಬರು ಆನು ದಾನಿಯಲ್ಲವಯ್ಯಾ, ನೀ ಹೇಳಿದಂತೆ ನಾ ಮಾಡಿದೆನು. ನೀ ಬರಹೇಳಿದಲ್ಲಿ ಬಂದೆನು; ನೀ ಇರಿಸಿದಂತೆ ಇದ್ದೆನು.” (ವ.ಸಂ. 100) ಸಿದ್ದರಾಮರು ನಿಸ್ವಾರ್ಥದಿಂದ ಜನ ಸೇವೆಮಾಡುತ್ತ, ತಮ್ಮ ಸಾಧನೆಯ ಹಾದಿಯಲ್ಲಿ ಎದುರಾಗಿರಬಹುದಾದ ಅಡ್ಡಿ ಆತಂಕಗಳನ್ನು, ಸತ್ವ ಪರೀಕ್ಷೆಗಳನ್ನು ಎದುರಿಸುತ್ತಲೇ ಜನರ ಮನಸ್ಸಿನಲ್ಲಿ ಪವಾಡ ಪುರುಷನಂತೆ ನೆಲೆಸಿದವರು.

ಸೊನ್ನಲಿಗೆಯ ಸಾಧಕ ಸಿದ್ಧರಾಮರು ಅಲ್ಲಮ ಪ್ರಭುವಿನ ಸಂಪರ್ಕಕ್ಕೆ ಬಂದ ನಂತರ ಕಲ್ಯಾಣಕ್ಕೆ ಬಂದು ಅಲ್ಲಿನ ಪ್ರಭಾವಕ್ಕೆ ಒಳಗಾಗಿ ಬಸವಾದಿ ಶರಣರ ಸಮಕಾಲೀನರಾಗಿ ಸ್ವಲ್ಪಕಾಲವಿದ್ದು ಕಲ್ಯಾಣ ಕ್ರಾಂತಿಯ ನಂತರ ತಿರುಗಿ ಸೊನ್ನಲಿಗೆಯಲ್ಲಿ ನೆಲೆಸಿ ತಮ್ಮ ಸಾಮಾಜಿಕ, ಧಾರ್ಮಿಕ ಕಾರ್ಯಗಳನ್ನು ಮುಂದುವರೆಸಿದರೆಂಬುದು ತಿಳಿದುಬರುತ್ತದೆ. ಸಿದ್ಧರಾಮರ ಬಗೆಗೆ ಅನೇಕ ಶಾಸನೋಕ್ತ ಉಲ್ಲೇಖಗಳು, ಕಾವ್ಯ ಕೃತಿಗಳು ರಚನೆಯಾಗಿರುವುದನ್ನು ಕಾಣಬಹುದು. ರಾಘವಾಂಕನ ಸಿದ್ಧರಾಮ ಚಾರಿತ್ರವು ಸಿದ್ಧರಾಮರ ಜೀವನದ ಬಗೆಗೆ ದೊರಕುವ ಆದ್ಯ ಗ್ರಂಥವಾದರೇ, ಜಯದೇವಿ ತಾಯಿ ಲಿಗಾಡೆ ಅವರ ‘ಸಿದ್ಧರಾಮೇಶ್ವರ ಪುರಾಣ’, ಜಿ.ಎಸ್. ಶಿವರುದ್ರಪ್ಪ ಅವರ ‘ಕರ್ಮಯೋಗಿ’, ಸಿದ್ಧಯ್ಯ ಪುರಾಣಿಕ ಅವರ ‘ಸಿದ್ಧರಾಮ’ ದಂತಹ ಹಲವು ಜೀವನ ಚರಿತ್ರೆಗಳು ರಚನೆಯಾಗಿವೆ. ಅಲ್ಲದೆ ಸಿದ್ಧರಾಮ ಮತ್ತು ಅವರ ವಚನಗಳನ್ನು ಕುರಿತ ಸಂಶೋಧನೆ ಹಾಗೂ ಅಧ್ಯಯನಾತ್ಮಕ ಗ್ರಂಥಗಳು ಆಧುನಿಕ ಕನ್ನಡ ಸಾಹಿತ್ಯದಲ್ಲಿ ಇಂದಿಗೂ ರಚನೆಯಾಗುತ್ತಲೇ ಇವೆ. ಆರ್. ಸಿ. ಹಿರೇಮಠ ಅವರ ‘ಶ್ರೀ ಸಿದ್ಧರಾಮೇಶ್ವರ ವಚನಗಳು’ ಗ್ರಂಥದಲ್ಲಿ ಸಿದ್ಧರಾಮರಿಗೆ ಸಂಬಂಧಿಸಿದ ಸು. 22 ಶಾಸನಗಳ ಉಲ್ಲೇಖವಿರುವುದು ಕಂಡುಬರುತ್ತದೆ.

ಕರ್ನಾಟಕ ಕವಿಚರಿತ್ರೆಯಲ್ಲಿ ಸಿದ್ಧರಾಮರ ಕಾಲವನ್ನು ಸು. 1160 ಎಂಬುದಾಗಿಯೂ ಈತನು ವಚನಗಳು, ಮಿಶ್ರಸ್ತೋತ್ರದ ತ್ರಿವಿಧಿ, ಬಸವಸ್ತೋತ್ರದ ತ್ರಿವಿಧಿ, ಅಷ್ಟಾವರಣ ಸ್ತೋತ್ರದ ತ್ರಿವಿಧಿ, ಕಾಲಜ್ಞಾನ, ಮಂತ್ರಗೋಪ್ಯ ಎಂಬ ಗ್ರಂಥಗಳನ್ನು ಬರೆದಿರುವುದಾಗಿ ತಿಳಿಸಿದೆ. ಆರ್. ಸಿ. ಹಿರೇಮಠ ಅವರ 'ಸಿದ್ಧರಾಮೇಶ್ವರ ವಚನಗಳು' ಗ್ರಂಥದಲ್ಲಿ ಕಪಿಲಸಿದ್ಧಮಲ್ಲೇಶ ಅಂಕಿತವಿರುವ ಶರಣನ ನಿಲುವು, ಷಡ್ಲಿಂಗ ತ್ರಿಪದಿ, ಕೈಲಾಸಪುರಕ್ಕಿಂದು ದಂಡುದಾಳಿ ಎಂಬ ಶೀರ್ಷಿಕೆಯ ಮೂರು ಹಾಡುಗಳನ್ನು ಕಾಣಬಹುದು. ಅಲ್ಲದೆ ಚನ್ನಪ್ಪ ಉತ್ತಂಗಿ ಅವರ 'ಸಿದ್ಧರಾಮ ಸಾಹಿತ್ಯ ಸಂಗ್ರಹ' ಗ್ರಂಥದಲ್ಲಿ ಯೋಗಿನಾಥ ಅಂಕಿತದಲ್ಲಿ ಬಸವಸ್ತೋತ್ರ ತ್ರಿವಿಧಿ, ಮಿಶ್ರಸ್ತೋತ್ರ ತಿವಿಧಿ, ಅಷ್ಟಾವರಣ ಸ್ತೋತ್ರ ತ್ರಿವಧಿಯ ಜೊತೆಗೆ ಸಿದ್ಧರಾಮನಿಗೆ ಪ್ರಭುದೇವರು ಉಪದೇಶ ಮಾಡಿದ ಮಂತ್ರಗೋಪ್ಯ, ಸಿದ್ಧರಾಮನಿಗೆ ಚೆನ್ನಬಸವಣ್ಣನವರು ಉಪದೇಶ ಮಾಡಿದ ಪದ ಮಂತ್ರಗೋಪ್ಯಗಳ ಸಂಗ್ರಹವಿದೆ. ಸಿದ್ಧರಾಮರ ವಚನಗಳು ಕಪಿಲಸಿದ್ಧ ಮಲ್ಲಿಕಾರ್ಜುನ ಎಂಬ ಅಂಕಿತದಲ್ಲಿ ಕೆಲವು ಶಾಸನಗಳು ಮತ್ತು ಹಸ್ತಪ್ರತಿಗಳಿಂದ ಲಭ್ಯವಾಗಿವೆ. ಸಿದ್ಧರಾಮನೆ ಸ್ವತಃ ಒಂದು ವಚನದಲ್ಲಿ ಅರುವತ್ತೆಂಟು ಸಾವಿರ ವಚನಂಗಳ ಹಾಡಿ ಹಾಡಿ ಸೋತಿತೆನ್ನ ಮನನೋಡಯ್ಯ (ವ.ಸಂ. 909) ಎಂದು ಹೇಳಿಕೊಂಡಿರುವುದನ್ನು ಗಮನಿಸಿದರೆ ಸಿದ್ಧರಾಮರು ಬರೆದಿರುವ ವಚನಗಳ ಸಂಖ್ಯೆ 68 ಸಾವಿರ ಎಂದಾಗುತ್ತದೆ. ಆದರೆ ನಮಗೆ ಸದ್ಯಕ್ಕೆ ದೊರಕಿರುವ ವಚನಗಳ ಸಂಖ್ಯೆ ತೀರ ಕಡಿಮೆ. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಪ್ರಕಟಿಸಿರುವ ಸಿದ್ಧರಾಮೇಶ್ವರ ವಚನ ಸಂಪುಟದಲ್ಲಿ 1679 ಸಂಖ್ಯೆಯಷ್ಟು ವಚನಗಳು ದೊರಕುತ್ತವೆ. ಇವು ಸಮಕಾಲೀನ ಸಾಮಾಜಿಕ, ಧಾರ್ಮಿಕ ಜನಜೀವನವನ್ನು ವಿಮರ್ಶಿಸುತ್ತ ಚಲನಶೀಲವಾದ ಜೀವನ ಮೌಲ್ಯಗಳನ್ನು ಪ್ರತಿಪಾದಿಸುತ್ತವೆ.

**ಪುಣ್ಯವ ಮಾಡಬೇಕೆಂದು ಮರುಗಬೇಡ**
**ಪಾಪವ ಮಾಡದಿದ್ದಡೆ ಪುಣ್ಯ ದಿಟ**
**ಬೇರೆ ತೀರ್ಥ ಬೇಡ**
**ಸತ್ಯವ ನುಡಿವಲ್ಲಿ ಸಂದಿಲ್ಲದಿಹನು**
**ಕಪಿಲಸಿದ್ಧ ಮಲ್ಲಿಕಾರ್ಜುನ.**

ವ್ಯಕ್ತಿ ತಾನು ಸಮಾಜಕ್ಕೆ ಒಳ್ಳೆಯ ಕಾರ್ಯಗಳನ್ನು ಮಾಡದಿದ್ದರೂ ಪರವಾಗಿಲ್ಲ ಆದರೆ ಪಾಪದ ಕಾರ್ಯಗಳನ್ನು, ಕೆಡಕುಗಳನ್ನು ಮಾಡಬಾರದು. ಹಾಗೆ ಮಾಡದಿರುವುದೇ ನಿಜವಾದ ಪುಣ್ಯ ಎಂಬುದಾಗಿದೆ. ಪಾಪ ಪುಣ್ಯಗಳೆಂಬುವು ಅಲೌಕಿಕ ನಡೆಗಳಲ್ಲ ಅವು ಲೌಕಿಕದಲ್ಲಿ ಆಚರಿಸಲ್ಪಡುವ ಸಾಮಾಜಿಕ ನಡವಳಿಕೆಯ ಮೌಲ್ಯಗಳಾಗಿವೆ. ಹಾಗಾಗಿ ಪುಣ್ಯ ಸಂಪಾದಿಸುವುದಕ್ಕಾಗಿ ಅಲೌಕಿಕ ಆಚರಣೆಗಳು ಬೇಕಿಲ್ಲ ಆ ಮರುಕವನ್ನು ಬಿಟ್ಟು ಲೌಕಿಕದಲ್ಲಿ ಯಾವುದೇ ಕೆಡಕುಗಳನ್ನು ಮಾಡದಿರುವುದೇ ಪುಣ್ಯ ಎಂಬುದಾಗಿ ಈ ವಚನದಲ್ಲಿ ಹೇಳಲಾಗಿದೆ. ಅಂದರೆ ಪುಣ್ಯ ಸಂಪಾದನೆಗಾಗಿ ಯಾವುದೇ ಆಡಂಬರವಾದ ಕಾರ್ಯಗಳನ್ನು ಮಾಡುವುದಕ್ಕಿಂತ ಸಮಾಜದಲ್ಲಿ ದುರಾಚಾರಿಯಾಗಿ ನಡೆದುಕೊಳ್ಳದೆ ಸತ್ಯಮಾರ್ಗದಲ್ಲಿ ನಡೆಯುವುದೇ ಪುಣ್ಯವಾಗಿದೆ. ಇಂತಹ ನಡೆಯಿಂದಾಗಿ ಶಿವನನ್ನು, ಸಾಮಾಜಿಕ ಬದುಕಿನ ನೆಮ್ಮದಿಯನ್ನು ಕಾಣಬಹುದು ಎಂಬುದನ್ನು ಈ ವಚನದಲ್ಲಿ ಪ್ರತಿಪಾದಿಸಲಾಗಿದೆ. ಇಲ್ಲಿ ಪಾಪ ಪುಣ್ಯಗಳಿಗಿಂತಲೂ ಸತ್ಯದ ನಡೆಯೇ ಶಿವ ಸಾಕ್ಷಾತ್ಕಾರವೂ ಲೌಕಿಕದ ಉದ್ದಾರವೂ ಆಗಿದೆ.

**ಜಾತಿ ವಿಜಾತಿಯು ನೀರ್ಗುಡಿಯ ಹೋದರೆ**
**ಸುಡು ಹೋಗೆಂದು ನೂಂಕಿತ್ತೆ ಆ ಜಲವು!**
**ಆ ಜಲದಂತಾಗಬೇಡವೆ ಹಿರಿಯರಾದವರು.**
**ಎನ್ನ ಮನವಿಚ್ಛಂದವಾಗದೊಂದೆಯಂದದಲ್ಲಿಪ್ಪಂತಪ್ಪ**
**ನಿಮ್ಮದೊಂದು ಸಮತಾಬುದ್ದಿ ಎನ್ನನೆಂದು ಬಂದು ಪೊರ್ದಿಪ್ಪುದೊ ಹೇಳಾ**
**ಕಪಿಲಸಿದ್ಧ ಮಲ್ಲಿಕಾರ್ಜುನ ದೇವರದೇವಾ (ವ.ಸಂ. 420)**

ಪ್ರಕೃತಿ ತತ್ವದಲ್ಲಿ ಜೀವರಾಶಿಗಳೆಲ್ಲವೂ ಒಂದೆ. ಒಂದಕ್ಕೊಂದು ಪೂರಕವಾಗಿ ವರ್ತಿಸುತ್ತವೆ. ಯಾವುದೇ ಜೀವಿಯು ಕೆರೆಯಲ್ಲಿ ನೀರು ಕುಡಿಯಲು ಹೋದರೆ ಆ ಜಲವು ಆ ಪ್ರಾಣಿಗಳ ಜಾತಿಗಳ ಬಗೆಗೆ ಯಾವುದೇ ತಕರಾರುಗಳನ್ನು ಎತ್ತಿ ಆಚೆಗೆ ನೂಕುವುದಿಲ್ಲ. ಆದರೆ ಮನುಷ್ಯನು ಮಾತ್ರ ಇಂತಹ ಪ್ರಕೃತಿಯ ಒಳಗೊಳ್ಳುವಿಕೆಯ ತತ್ವಕ್ಕೆ ವಿರುದ್ಧವಾಗಿಯೇ ವರ್ತಿಸುವುದನ್ನು ಈ ವಚನವು ಖಂಡಿಸುತ್ತದೆ. ಈ ಸಮಾಜದಲ್ಲಿ ಹಿರಿಯರು, ಜ್ಞಾನಿಗಳು, ತಿಳಿದವರು, ವಿದ್ಯಾವಂತರೆನಿಸಿಕೊಂಡವರು ಜಲದಂತಹ ಚಲನಶೀಲವಾದ ಸಮಾನತೆಯ ಗುಣವನ್ನು ಆಚರಿಸಬೇಕು. ಮಾನವನಿಗೆ ಮೇಲು ಕೀಳೆನ್ನದೆ ಜಾತಿ ವಿಜಾತಿ ಎನ್ನದೆ ಸರ್ವರೂ ಸಾಮರಸ್ಯದಿಂದ ಬದುಕುವ ಸಮತಾ ಬುದ್ಧಿ ಬರಬೇಕು ಎಂಬುದಾಗಿದೆ. ಈ ಶರಣ ಸಂಸ್ಕೃತಿಯು ಇಂತಹ ಸಮತೆಯನ್ನು ಪ್ರತಿಪಾದಿಸುತ್ತದೆ. ಸ್ವತಃ ಸಿದ್ಧರಾಮನು ಕೆರೆ ಕಟ್ಟೆಗಳನ್ನು ಕಟ್ಟಿಸಿದ ಮೇಲೆ ಜಾತೀಯತೆಯ ಚೌಕಟ್ಟುಗಳನ್ನು ಕಿತ್ತೊಗೆದು ಸಮತೆಯನ್ನು ಸಾಧಿಸಿ ಸರ್ವ ಜಾತಿ ಜನಾಂಗಕ್ಕೂ ಅದನ್ನು ಮುಕ್ತಗೊಳಿಸಿರುವುದನ್ನು ಈ ವಚನ ಸೂಚಿಸುತ್ತದೆ. ಎಲ್ಲವನ್ನೂ, ಎಲ್ಲರನ್ನೂ ಸಮಾನವಾಗಿ ಒಳಗೊಳ್ಳುವ ಜಲದ ಗುಣದಂತೆ ಬದುಕಿದವರು ನಮ್ಮ ಶಿವ ಶರಣರು. ಪ್ರಾಕೃತಿಕ ಸಂಪತ್ತು ಈ ಭೂಮಿ ಮೇಲಿನ ಎಲ್ಲ ಜೀವರಾಶಿಗಳಿಗೂ ಸೇರಿದ್ದು ಅದು ಎಲ್ಲರಿಗೂ ಸಮಾನವಾಗಿ ದೊರಕಬೇಕು ಎಂಬುದು 12ನೇ ಶತಮಾನದ ಶರಣ ಸಂಸ್ಕೃತಿಯ ನಡೆನುಡಿಯಾಗಿದೆ.

**ತಾ ಮಾಡಿದ ಹೆಣ್ಣು ತನ್ನ ತಲೆಯನೇರಿತ್ತು.**
**ತಾ ಮಾಡಿದ ಹೆಣ್ಣು ತನ್ನ ತೊಡೆಯನೇರಿತ್ತು.**
**ತಾ ಮಾಡಿದ ಹೆಣ್ಣು ಬ್ರಹ್ಮನ ನಾಲಗೆಯನೇರಿತ್ತು.**
**ತಾ ಮಾಡಿದ ಹೆಣ್ಣು ನಾರಾಯಣನ ಎದೆಯನ್ನೇರಿತ್ತು.**
**ಅದು ಕಾರಣ ಹೆಣ್ಣು ಹೆಣ್ಣಲ್ಲ, ಹೆಣ್ಣು ರಾಕ್ಷಿಸಿಯಲ್ಲ;**
**ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧ ಮಲ್ಲಿಕಾರ್ಜುನ ನೋಡಾ!** (ವ. ಸಂ. 468)

ಭಾರತೀಯ ಸಾಂಪ್ರದಾಯಿಕ ಆಲೋಚನೆಗಳಲ್ಲಿ ಹೆಣ್ಣನ್ನು ಆಧ್ಯಾತ್ಮ ಸಾಧನೆಗೆ ಒಂದು ಅಡ್ಡಿ ಎಂಬಂತೆ, ಮಾಯೆ ಎಂಬಂತೆ ಭಾವಿಸಲಾಗಿತ್ತು. ಆದರೆ ಶರಣ ಚಳವಳಿಯು ಹೆಣ್ಣನ್ನು ತಮ್ಮ ಲೌಕಿಕ ಬದುಕಿಗೂ ಹಾಗೂ ಆಧ್ಯಾತ್ಮ ಸಾಧನೆಗೂ ಸಮಾನ ಸಂಗಾತಿಯಾಗಿ ಪೂರಕವಾಗಿ, ಪರಿಭಾವಿಸಿದೆ. ಪುರುಷ ಪ್ರಧಾನ ಸಂಸ್ಕೃತಿಯು ಪ್ರತಿಪಾದಿಸುತ್ತಾ ಬಂದಿರುವ ಚೌಕಟ್ಟಿನ ಪರಿಧಿಯನ್ನು ಮೀರಿ ಹೆಣ್ಣನ್ನು ಇಲ್ಲಿ ದೈವತ್ವದ ಹಿನ್ನೆಲೆಯಲ್ಲಿ ನೋಡಿರುವುದು ಮಹತ್ವಪೂರ್ಣವಾಗಿದೆ. ಸಿದ್ಧರಾಮರು ಈ ವಚನದಲ್ಲಿ ಹೆಣ್ಣನ್ನು ಸಾಕ್ಷಾತ್ ಕಪಿಲಸಿದ್ಧ ಮಲ್ಲಿಕಾರ್ಜುನ ಎಂದು ಶಿವನಿಗೆ ಸಮೀಕರಿಸಿರುವುದು ಗಮನಾರ್ಹವಾದುದು. ಇಲ್ಲಿ ಹೆಣ್ಣನ್ನು ಲೌಕಿಕವಾಗಿಯೂ, ಆಧ್ಯಾತ್ಮಿಕವಾಗಿಯೂ ಸಮಾನವಾಗಿ ಕಾಣಲಾಗಿದೆ. ಶಿವನ ತಲೆಯನ್ನೇರಿ ಗಂಗೆಯಾಗಿ, ಅರ್ಧಾಂಗಿಯಾಗಿ, ಬ್ರಹ್ಮನ ನಾಲಗೆಯನ್ನೇರಿ ಸರಸ್ವತಿಯಾಗಿ, ನಾರಾಯಣನ ಎದೆಯನ್ನೇರಿ ಲಕ್ಷ್ಮೀಯಾಗಿಯೂ ಕಂಡುಬರುವ ಹೆಣ್ಣು ಪುರುಷನಿಗೆ ಸರಿಸಮಾನಳಾಗಿದ್ದಾಳೆ. ಅವಳನ್ನು ರಾಕ್ಷಸಿ, ಚಂಚಲೆ, ಮಾಯೆ ಎಂಬ ಸಾಂಪ್ರದಾಯಿಕ ದೃಷ್ಟಿಕೋನಗಳನ್ನು ಮೀರಿದ ಆಲೋಚನೆಯು ಈ ತ್ರಿಮೂರ್ತಿಗಳ ಹಿನ್ನೆಲೆಯಲ್ಲಿ ಹೆಣ್ಣಿಲ್ಲದೆ ಪುರುಷ ಪರಿಪೂರ್ಣವಲ್ಲ ಎಂಬುದನ್ನು ಕಟ್ಟಿಕೊಡಲಾಗಿದೆ. ಹೆಣ್ಣಾಗಲೀ ಗಂಡಾಗಲೀ, ಒಂದಕ್ಕೊಂದು ಪೂರಕವೇ ಹೊರತು ಪ್ರತ್ಯೇಕವಾಗಲೀ ಮೇಲು-ಕೀಳಾಗಲೀ ಅಲ್ಲ. ಎಂಬುದಾಗಿ ದೈವತ್ವದ ಹಿನ್ನೆಲೆಯಲ್ಲಿ ಮಾನವತ್ವವನ್ನು ತಿದ್ದುವ ಪರಿಯನ್ನು ಇಲ್ಲಿ ಕಾಣಬಹುದು.

**ಕುಲಕುಲವೆಂದು ಹೋರಾಡುವ ಅಣ್ಣಗಳಿರಾ ಕೇಳಿರೋ;**
**ಕುಲವೇ ಡೋಹರನ? ಕುಲವೇ ಮಾದಾರನ ಕುಲವೇ ದೂರ್ವಾಸನ?**
**ಕುಲವೇ ವ್ಯಾಸನ? ಕುಲವೇ ವಾಲ್ಮೀಕನ? ಕುಲವೇ ಕೌಂಡಿಲ್ಯನ?**
**ಕುಲವ ನೋಳ್ಪಡೆ ಹುರುಳಿಲ್ಲ;**
**ಅವರ ನಡೆಯ ನೋಳ್ಪಡೆ ನಡೆಯುವರು ತ್ರಿಲೋಕದಲ್ಲಿಲ್ಲ ನೋಡಾ**
**ಕಪಿಲಸಿದ್ಧ ಮಲ್ಲಿಕಾರ್ಜುನಾ (ವ.ಸಂ. 1205)**

ತಮ್ಮ ಹುಟ್ಟಿನಿಂದ ಆರೋಪಿತವಾದ ಕುಲವನ್ನು ಮೀರಿ ನಿಂತು ತಮ್ಮ ನಡೆಯಿಂದ ಲೋಕವನ್ನು ಸಾಧಿಸಿದ ತನ್ನ ಸಮಕಾಲೀನ ಶರಣರು ಹಾಗೂ ಪುರಾಣ ಕಾಲದ ಮುನಿಗಳ ಬಗೆಗೆ ಹೇಳುತ್ತ ಸಾಧಕರನ್ನು ಕುಲ ಜಾತಿಗಳ ಹಿನ್ನೆಲೆಯಲ್ಲಿ ಗುರ್ತಿಸಬಾರದು ಎಂಬುದನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ. ಸಿದ್ಧರಾಮರ ಮತ್ತೊಂದು ವಚನದಲ್ಲಿ "ಕುಲದ ಬಳಿಯ ದೇವನಲ್ಲ, ಮನದ ಬಳಿಯ ದೇವನ್ನೈಸೆ" ಎಂಬುದನ್ನು ನೋಡಬಹುದು. ಇಲ್ಲಿ ವ್ಯಕ್ತಿಯ ಕುಲಜಾತಿಗಿಂತಲೂ ಅವನ ನಡೆನುಡಿಗಳು ಮುಖ್ಯವಾಗುತ್ತವೆ. ಇಂತಹ ನಡವಳಿಕೆಗಳು ಸಾಮಾಜಿಕ ಮತ್ತು ಧಾರ್ಮಿಕ ಬದುಕಿಗಾಗಲೀ, ಸಾಧನೆಗಾಗಲೀ ಮಾನದಂಡಗಳಾಗುತ್ತವೆಯೋ ಹೊರತು ಕುಲ ಜಾತಿಗಳಲ್ಲ ಎಂಬುದನ್ನು ಇಲ್ಲಿ ಗಮನಿಸಬೇಕು. ಇಂದಿನ ಸಮಕಾಲೀನ ಸಮಾಜದಲ್ಲಿ ಇರುವ ಸಂಕುಚಿತ ಮನಸ್ಥಿತಿಗಳನ್ನು ತಿದ್ದುತ್ತ ಅದರಾಚೆಗಿನ ಚಲನಶೀಲವಾದ ಆಲೋಚನೆಗಳನ್ನು ಪ್ರತಿಪಾದಿಸಲಾಗಿದೆ.

**ಸುಖಕ್ಕೆ ದೈವವೆಂದು, ಸುಖಕ್ಕೆ ವಿಧಿಲಿಪಿಯೆಂದು**
**ಸುಖಕ್ಕೆ ಪುಣ್ಯವೆಂದು ಸುಖಕ್ಕೆ ಪ್ರಾರಬ್ಧವೆಂದು**
**ನುಡಿವರಯ್ಯ ಸಿದ್ಧಾಂತಿಗಳು**
**ಸುಖವೆ ದೈವವೆಸಲಾಗಿ ಮಾಡುವ ಕ್ರಿಯೆಯಲ್ಲರಿಯ ಬಂದಿತ್ತು**
**ಸುಖವು ದೈವವಲ್ಲ;**
**ದೈವವದು ಕಪಿಲಸಿದ್ಧ ಮಲ್ಲಿಕಾರ್ಜುನನಲ್ಲಿ ಕೂಡುವ ಕೂಟವು (ವ.ಸಂ. 1653)**

ಸಾಮಾಜಿಕ ಬದುಕಿನಲ್ಲಿ ಒದಗುವ ಸುಖ ದುಃಖಗಳನ್ನು ಸಿದ್ಧಾಂತಿಗಳ ಪ್ರಕಾರ ಈ ಮೊದಲೆ ರೂಪುಗೊಂಡಿರುವ ಪ್ರಾರಬ್ಧವೆಂದು, ಹಣೆ ಬರಹವೆಂದು ತಿಳಿಯುವುದು ರೂಢಿಯಲ್ಲಿದೆ. ಆದರೆ ಮನುಷ್ಯನಿಗೆ ಸುಖ ದುಃಖಗಳು ಪ್ರಾಪ್ತವಾಗುವುದು ಯಾವುದೇ ದೈವ ಬಲದಿಂದಲ್ಲ, ತಾನು ಮಾಡುವ ಕ್ರಿಯೆಯಿಂದಾಗಿ ಅವು ಒದಗಲ್ಪಡುತ್ತವೆ. ತನ್ನ ನಡವಳಿಕೆಯೇ ತನ್ನ ಲೌಕಿಕ ಬದುಕಿನ ಸ್ಥಿತಿಗತಿಗಳನ್ನು ಆಧರಿಸಿರುವುದರಿಂದ ಸುಖವು ಈ ಮೊದಲೆ ನಿರ್ಧರಿಸಿರುವಂತದ್ದಲ್ಲ. ಅದರ ಇರುವು ಮತ್ತು ಬರುವು ನಮ್ಮ ನಡತೆಯನ್ನು ಕುರಿತದ್ದಾಗಿರುತ್ತದೆ. ಆದ್ದರಿಂದ ಶಿವಭಕ್ತಿಯ ನಡೆಯೂ ಕೂಡ ಲೌಕಿಕ ಪರಿಣಾಮಕ್ಕಾಗಿಯೇ ಆಚರಿಸುವಂತದ್ದಾಗಿದೆ. ಹಾಗಾಗಿ ಸುಖದುಃಖಗಳು ಪೂರ್ವನಿರ್ಧಾರಿತಗಳಲ್ಲ ಅದೃಷ್ಟ, ಹಣೆಬರಹ, ಪಾಪ ಪುಣ್ಯಗಳು ಎಂಬ ಆರೋಪಿತ ಪರಿಕಲ್ಪನೆಗಳನ್ನು ಇಲ್ಲಿ ಖಂಡಿಸಲಾಗಿದೆ. ಕ್ರಿಯೆಗೆ ತಕ್ಕಂತೆ ಪ್ರತಿಕ್ರಿಯೆಗಳು ಎಂಬಂತೆ ಲೌಕಿಕ ಬದುಕಿನ ಸ್ಥಿತಿಗತಿಗಳು ಏರ್ಪಡುತ್ತವೆ ಎಂಬುದಾಗಿದೆ.

**ಒಬ್ಬರ ಮನ ನೋಯಿಸಿ, ಒಬ್ಬರ ಮನೆಯ ಘಾತವಮಾಡಿ**
**ಗಂಗೆಯ ಮುಳುಗಿದಡೇನಾಗುವುದಯ್ಯಾ?**
**ಚಂದ್ರನು ಗಂಗೆಯ ತಡೆಯಲ್ಲಿದ್ದಡೇನು? ಕಲಂಕ ಬಿಡದಾಯಿತ್ತಯ್ಯಾ?**
**ಅದು ಕಾರಣ ಮನವ ನೋಯಿಸದವನೆ**
**ಒಬ್ಬರ ಘಾತವ ಮಾಡದವನೇ**
**ಪರಮ ಪಾವನ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನ.(ವ.ಸಂ. 290)**

ಒಬ್ಬರ ಮನಸ್ಸನ್ನು ನೋಯಿಸಿ ತಾನು ಮಾತ್ರ ಪರಿಶುದ್ಧ ಎಂದು ಬಿಂಬಿಸಿಕೊಳ್ಳುವ ಮುಖವಾಡದ ವ್ಯಕ್ತಿತ್ವಗಳನ್ನು ಈ ವಚನದಲ್ಲಿ ಖಂಡಿಸಲಾಗಿದೆ. ಸಮಾಜದಲ್ಲಿ ಅನೇಕ ಕೆಡುಕುಗಳನ್ನು ಮಾಡುತ್ತಾ ಬದುಕುವ ಕಂಟಕ ವ್ಯಕ್ತಿತ್ವಗಳು ದೈವದ ಹೆಸರಿನಲ್ಲಿ ಗಂಗೆಯಲ್ಲಿ ಮುಳುಗಿ ತನ್ನ ಪಾಪವು ಪರಿಹಾರವಾಯಿತು ಎಂದು ತಿಳಿಯುವುದು ಅನುಕೂಲಸಿಂಧು ನಡವಳಿಕೆಯಾಗಿದೆ. ಇಂತವರ ನಡವಳಿಕೆಯು ಗಂಗೆಯಲ್ಲಿ ಮುಳುಗಿದರೂ ಪರಿಶುದ್ಧವಾಗುವುದು ಎಂದಿಗೂ ಸಾಧ್ಯವಿಲ್ಲ ಆದ್ದರಿಂದ ಗಂಗೆಯಲ್ಲಿ ಮುಳುಗೇಳದಿದ್ದರೂ

ಮತ್ತೊಬ್ಬರಿಗೆ ತೊಂದರೆ ಕೊಡದವನು, ಪರರ ಮನಸ್ಸನ್ನು ನೋಯಿಸದವನು, ಸಾಮಾಜಿಕ ಸಹ ಜೀವನ ನಡೆಸುವ ನಿರುಪದ್ರವಿಗಳೇ ನಿಜವಾದ ಪರಿಶುದ್ಧರು ಎಂಬುದು ಈ ವಚನದಲ್ಲಿದೆ. ಈ ಮೂಲಕ ಕೆಡುಕಿನ ಲೌಕಿಕ ನಡತೆಯನ್ನು ತಮ್ಮ ಧಾರ್ಮಿಕ ಆಚರಣೆಯ ಮೂಲಕ ಮರೆಮಾಚುವ ಡಾಂಭಿಕ ಭಕ್ತಿಯನ್ನು ಖಂಡಿಸಲಾಗಿದೆ. ಧಾರ್ಮಿಕ ಆಚರಣೆಗಿಂತಲೂ ಲೌಕಿಕದಲ್ಲಿ ಸಾಮಾಜಿಕ ಸಹಬಾಳ್ವೆಯೇ ಮುಖ್ಯ ಎಂಬುದನ್ನು ಇಲ್ಲಿ ಪ್ರತಿಪಾದಿಸಲಾಗಿದೆ. ಈ ಶರಣರು ಲೌಕಿಕ ಬದುಕಿಗೆ ಕೊಟ್ಟಿರುವ ಪ್ರಾಮುಖ್ಯತೆಯನ್ನು ಕಾಣಬಹುದಾಗಿದೆ. ದೇಹದ ಶುಚಿತ್ವಕ್ಕಿಂತ ಮನಸ್ಸಿನ ಶುಚಿತ್ವವು ಮುಖ್ಯ. ದೇಹದ ಶುಚಿತ್ವವನ್ನು ಗಂಗೆಯ ಮೂಲಕ ಪಡೆಯಬಹುದಾದರೂ ಮನಸ್ಸಿನ ಶುಚಿತ್ವವನ್ನು ನಮ್ಮ ನಡವಳಿಕೆಯ ಮೂಲಕವೇ ಸಾಧಿಸಿಕೊಳ್ಳಬೇಕು ಎಂಬುದಾಗಿದೆ.

'ಆರೇನಂದಡೂ ಓರಂತಿಪ್ಪುದೆ ಸಮತೆ' (ವ.ಸಂ166) ಎಂಬುದರಲ್ಲಿ ಹೊಗಳಿಕೆ ತೆಗಳಿಕೆಯ ಆಚೆಗೆ ಮನಸ್ಸಿನ ಸಮಚಿತ್ತವನ್ನು ಸಾಧಿಸಿಕೊಳ್ಳಬೇಕಾದ ಶರಣರ ಆದರ್ಶವನ್ನು, 'ಸೂತಕ ಪಾತಕ ವಿರಹಿತನಾದಡೆ ಆತನ ತನು ಸಾಕ್ಷಾತ್ ಶಿವನ ತನು' (ವ.ಸಂ.800) ಎಂಬಲ್ಲಿ ಸಾಮಾನ್ಯನೂ ಶಿವತ್ವಕ್ಕೇರಬಲ್ಲ ನಡೆಯನ್ನು ಗುರುತಿಸುತ್ತಾ ಮಡಿ ಮೈಲಿಗೆಯಾಚೆಗಿನ ನಡೆಯನ್ನು ಶಿವತ್ವ ಎಂದು ಪ್ರತಿಪಾದಿಸಲಾಗಿದೆ. 'ಮನದಲ್ಲಿ ಭೇದವಲ್ಲದೆ ವಸ್ತುವಿನಲ್ಲಿ ಭೇದವಿಲ್ಲಯ್ಯ' (ವ.ಸಂ 1368) ವಚನದಲ್ಲಿ ಪ್ರಕೃತಿಯಲ್ಲಿಯೇ ಆಗಲೀ, ಸಮಾಜದಲ್ಲಿಯೇ ಆಗಲಿ ಯಾವ ವಸ್ತುವೂ, ಜೀವಿಯೂ, ಮನುಷ್ಯನೂ ಮೇಲು-ಕೀಳುಗಳಲ್ಲ ಆದರೆ ಅವನು ನೋಡುವ ನಮ್ಮ ದೃಷ್ಟಿಕೋನ ಭೇದವೆಣಿಸುತ್ತದೆ. ಬೇರೆ ಬೇರೆಯಾಗಿರುವ ಕ್ರಿಯೆಯನ್ನು ಜ್ಞಾನದ ಮೂಲಕವೂ, ವಿಭಿನ್ನ ರೂಪಗಳನ್ನು ಚೈತನ್ಯದ ಮೂಲಕವೂ ಸಮಾನತೆಯನ್ನು ಕಂಡುಕೊಳ್ಳಬೇಕು ಎಂಬುದಾಗಿದೆ. 'ಒಣಗಿದ ಮರವದು ಭೂಮಿಯಲ್ಲೇ ಲೀನ ನೋಡಾ' (ವ.ಸಂ 1567) ಇದರಲ್ಲಿ ಪುನರ್ ಜನ್ಮಗಳನ್ನು ಈ ದೃಷ್ಟಾಂತದ ಮೂಲಕ ಅಲ್ಲಗಳೆಯುತ್ತ ದೊರಕಿರುವ ಈ ಜನ್ಮವನ್ನು ಸಾರ್ಥಕವಾಗಿ ಬದುಕಬೇಕು ಎಂಬುದನ್ನು ಸೂಚಿಸುತ್ತದೆ. ಸ್ವರ್ಗದ ಪರಿಕಲ್ಪನೆಯನ್ನು ಹುಸಿ ಎಂದು ಸಾರುತ್ತ ಇಹದ ಪ್ರಾಮುಖ್ಯತೆಯನ್ನು ಪ್ರತಿಪಾದಿಸುತ್ತದೆ. 'ಜ್ಞಾನಿಗಳು ತಾವಾದ ಬಳಿಕ ವಿಶ್ವಾಸಘಾತವ ಮಾಡಬಾರದು' (ವ.ಸಂ. 427) ಎಂಬುದರಲ್ಲಿ ಜ್ಞಾನಿಗಳಾಗಿ ಗುರುತಿಸಿಕೊಂಡವರಿಗೆ ಸಾಮಾಜಿಕ ಜವಾಬ್ದಾರಿಗಳು ಇರಬೇಕು ಗುರುಹಿರಿಯರನ್ನು ಅನ್ಯಸ್ತ್ರೀಯರನ್ನು ಗೌರವಿಸಬೇಕು. ಅನ್ಯರ ಹಂಗಿಗೆ ಒಳಗಾಗಿ ಅಸತ್ಯವನ್ನು ನುಡಿಯಬಾರದು ಎಂಬಂತಹ ಸರಳವಾದ, ನೇರವಾದ ಸಾಮಾಜಿಕ ಬದುಕಿನಲ್ಲಿರಬೇಕಾದ ಗುಣಗಳನ್ನು ಅಭಿವ್ಯಕ್ತಿಸುತ್ತವೆ.

ಸಿದ್ಧರಾಮನ ಇಂತಹ ಕೆಲವು ವಚನಗಳನ್ನು ನೋಡಿದರೆ ಇವು ಶರಣರ ನಡೆಯಂತೆಯೇ ಸಮಾಜದೊಂದಿಗೆ ಮನೋಚಿಕಿತ್ಸೆಯ ಮೂಲಕ ನಡೆಸಿರುವ ಆಪ್ತ ಸಮಾಲೋಚನೆಗಳಂತೆ ಕಂಡುಬರುತ್ತವೆ. ಹೆಚ್ಚಿನ ವಚನಗಳು ಮನಪರಿವರ್ತನೆಯನ್ನೇ ಕುರಿತದ್ದಾಗಿವೆ. ಮನ, ವಚನ, ಕಾಯಕಗಳು ಪರಿಶುದ್ಧವಾಗಿರಬೇಕು ಎಂಬುದನ್ನು ಒತ್ತಿ ಹೇಳುತ್ತ ಆ ಮೂಲಕ ಲೌಕಿಕ ಬದುಕನ್ನು, ಧಾರ್ಮಿಕತೆಯನ್ನು ಸುಧಾರಿಸಿಕೊಳ್ಳಬೇಕೆಂಬುದನ್ನು ಪ್ರತಿಪಾದಿಸುತ್ತವೆ. ತಮ್ಮ ತಮ್ಮ ದೈವ ಸಾಕ್ಷಾತ್ಕಾರಕ್ಕಾಗಿ ಧಾರ್ಮಿಕ ನಡವಳಿಕೆಗಿಂತಲೂ ಲೌಕಿಕ ನಡತೆಯು ಮುಖ್ಯವಾಗಿರಬೇಕು, ಸಾಮಾಜಿಕ ಬದುಕು ಹಸನಿಲ್ಲದೇ, ಶುದ್ಧ ಧಾರ್ಮಿಕತೆಯನ್ನು ಕಾಣಲು ಸಾಧ್ಯವಿಲ್ಲ ಎಂಬ ಲೌಕಿಕೋಕ್ತಿಯೇ ಇಲ್ಲಿ ಪ್ರಧಾನವಾಗಿ ಬಿಂಬಿತವಾಗಿದೆ. ಒಟ್ಟಾರೆಯಾಗಿ ಸಿದ್ಧರಾಮನ ವಚನಗಳು ಮನಸ್ಸಿನ ಸಮತೆಯ ಮೂಲಕ ಸಾಧಿಸಿಕೊಳ್ಳಬಹುದಾದ ಲೌಕಿಕ ಬದುಕನ್ನು, ಲೌಕಿಕ ಸನ್ನಡತೆಯಿಂದ ಕಂಡುಕೊಳ್ಳಬಹುದಾದ ಆಧ್ಯಾತ್ಮವನ್ನು ಕುರಿತು ಮಾತನಾಡುತ್ತವೆ. ನಮ್ಮ ಮನಸ್ಸನ್ನು ಎಲ್ಲಾ ಸಾಂಪ್ರದಾಯಿಕ ಸಂಕುಚಿತಗಳಾಚೆಗೆ ಮುಕ್ತವಾಗಿರಿಸಿಕೊಂಡು ಜೀವಪರ ಮೌಲ್ಯಗಳನ್ನು ಆಚರಿಸಬೇಕು ಎಂಬುದನ್ನು ಇವು ಪ್ರತಿಪಾದಿಸುತ್ತವೆ. ಇವು ಕೇವಲ ಆದರ್ಶಮಾತ್ರವಾಗಿರದೆ ಅನಿವಾರ್ಯ ಮೌಲ್ಯಗಳಾಗಿ ಆಚರಣೆಗೆ ಬಂದರೆ ಶರಣರ ಶ್ರಮ ಸಾರ್ಥಕವಾಗುತ್ತದೆ.

**ಪರಾಮರ್ಶನ ಗ್ರಂಥಗಳು**


1. ಡಾ. ಎಸ್. ವಿದ್ಯಾಶಂಕರ (ಸಂ) – ಸಿದ್ಧರಾಮೇಶ್ವರ ವಚನ ಸಂಪುಟ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು–(1993)
2. ಡಾ. ಸಿದ್ಧಯ್ಯ ಪುರಾಣಿಕ – ಶರಣ ಚರಿತಾಮೃತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು (2013)
3. ಡಾ.ಕೆ.ಆರ್. ಸಿದ್ಧಗಂಗಮ್ಮ – ಸಿದ್ಧರಾಮೇಶ್ವರ, ಶ್ರೀ ಬಸವ ಅಧ್ಯಯನ ಪೀಠ, ಮೈಸೂರು ವಿಶ್ವವಿದ್ಯಾನಿಲಯ (2015).
4. ಡಾ. ಆರ್.ಸಿ. ಹಿರೇಮಠ (ಸಂ) – ಶ್ರೀಸಿದ್ಧರಾಮೇಶ್ವರ ವಚನಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ (1968)
5. ಚನ್ನಪ್ಪ ಉತ್ತಂಗಿ (ಸಂ) – ಸಿದ್ಧರಾಮ ಸಾಹಿತ್ಯ ಸಂಗ್ರಹ, ಕನ್ನಡ ಕೋಟೆ, ಸೊಲ್ಲಾಪುರ (1955).